ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ಹೌದು

ಆ) ಹೌದು

ಇ) ನೇರ ನೇಮಕಾತಿ ಮೂಲಕ ಒಟ್ಟು 4,499 ಸಿವಿಲ್ ಪೊಲೀಸ್ ಪೇದೆಗಳನ್ನು 1994ರ ನಂತರ ತುಂಬಲಾಗಿದೆ.

ಈ) ಸಿ.ಎ.ಆರ್ ಮತ್ತು ಡಿ.ಎ.ಆರ್.ನಲ್ಲಿರುವ ಅಭ್ಯರ್ಥಿಗಳಿಗಾಗಿ ಒಟ್ಟು 355 ಹುದ್ದೆಗಳನ್ನು ಮೀಸಲಿಡಲಾಗಿದೆ.

ಸ್ವಾತಂತ್ರ ಹೋರಾಟಗಾರರಿಗೆ ಮಾಸಾಶನ.

972(1346) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋವಾ ವಿಮೋಚನೆಗೆ ಹೋರಾಟ ಮಾಡಿದ ಸಂತ್ರಸ್ತರಿಗೆ ಮಾಸಾಶನ ಕೊಡುತ್ತಿದ್ದುದು ನಿಜವೆ.

ಆ) ಹಾಗಿದ್ದಲ್ಲಿ ಅದನ್ನು ಈಗ ನಿಲ್ಲಿಸಲು ಕಾರಣವೇನು.

ಇ) ಇದನ್ನು ಪುನರ್ ಪರಿಶೀಲಿಸಿ ಕೊಡಲು ನಿರ್ಧಾರ ತೆಗೆದುಕೊಳ್ಳಲಾಗುವುದೆ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) ಹೌದು

ಆ) ಗೋವಾ ಗೌರವಧನ ಮಂಜೂರಾತಿ ಯೋಜನೆಯು ಸಮರ್ಪಕವಾಗಿ ಕೆಲಸ ನಿರ್ವಹಿಸದ ಕಾರಣದ ಮೇರೆಗೆ ದಿನಾಂಕ : 19-4-95 ರಿಂದ ಜಾರಿಗೆ ಬರುವಂತೆ ಈ ಯೋಜನೆಯನ್ನು ಸರ್ಕಾರವು ಹಿಂತೆಗೆದುಕೊಂಡಿದೆ.

ಇ) ಇಲ್ಲ.

ತುಂಗಾ ಮೇಲ್ದಂಡೆ ಯೋಜನೆ.

974(1468) ಶ್ರೀ ಕುನಾಮೂರು ಮಂಜುನಾಥ್ ಚೆನ್ನಪ್ಪ (ಶಿಗ್ಗಾಂವ್) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತುಂಗಾ ಮೇಲ್ದಂಡೆ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಯಿತು?

2. ಸದರಿ ಯೋಜನೆಯ ಅಂದಾಜು ವೆಚ್ಚ ಎಷ್ಟು ಹಾಗೂ ಆ ಬಗ್ಗೆ ಈವರೆಗೆ ಮಾಡಿದ ವೆಚ್ಚ ಎಷ್ಟು?